# ನೀವು ಕೇಳಿದಿರಿ?

ಎನ್.ಕೆ. ಹೆಬ್ಬಾರ್, ಕೋಣಸ
ಕಾಲ ಬದಲಾಗಿದೆ. ಏನಂತೀರಿ?



ನಿಜ. ಡೇಲೈಟ್ ಸೇವಿಂಗ್ ಬಂದಾಗಿನಿಂದ ಆಗಾಗ್ಗೆ ಒಂದೊಂದು ಗಂಟೆಯಷ್ಟು ಕಾಲ ಬದಲಾಗುತ್ತಿದೆ.

ಎನ್. ಮುಕ್ತಾ, ಮೈಸೂರು
ವಾಲಿ, ಸುಗ್ರೀವ ಮುಂತಾದ ವಾನರರದು ಮಂಗನ ಮುಖ; ಅವರ ಸತಿಯರಿಗೇಕೆ ಮಂಗನ ಮುಖವಿಲ್ಲ?
ಗಂಡು ಕೋತಿಯಂತಿದ್ದರೂ ಸುಂದರಿಯನ್ನೇ ವರಿಸುವುದು ಅಂದೂ ಚಾಲ್ತಿಯಲ್ಲಿತ್ತು.

ಹೆಚ್. ಯುವರಾಜ, ಕುಡತಿನಿ ಪಟ್ಟಣ
ಒಬ್ಬಳೇ ಹೆಂಡತಿ ಇರುವವರಿಗೂ, ಇಬ್ಬರು ಹೆಂಡತಿಯರು ಇರುವವರಿಗೂ ಏನು ವ್ಯತ್ಯಾಸ?
ಸ್ತ್ರೀಯರ ದೃಷ್ಟಿಯಲ್ಲಂತೂ ಒಬ್ಬ ನಿಷ್ಠ; ಇನ್ನೊಬ್ಬ ಕನಿಷ್ಠ.

ಪಿ.ಜೆ. ರಾಘವೇಂದ್ರ, ಮೈಸೂರು
ಟೀವಿಯಲ್ಲಿ ವಾರ್ತೆ ಓದುವವರು ಸದಾ ತಮ್ಮ ಪಕ್ಕದಲ್ಲಿ ಪೆದ್ದುಪೆದ್ದಾಗಿ ಮಾತಾಡುವವರೊಬ್ಬರನ್ನು ಕೂರಿಸಿಕೊಳ್ಳುವುದೇಕೆ?




ಅವರೇನಾದರೂ ಬುದ್ಧಿವಂತರಾಗಿದ್ದರೆ ಇವರು ಸುದ್ದಿಗೇ ಇರುವುದಿಲ್ಲವಾದ್ದರಿಂದ.

ಅರುಣ್ ಕುಲಕರ್ಣಿ, ನರೇಗಲ್ಲ
ಹೊರಗೆ ಸರ್ಕಾರ ವಿಧಿಸುವ ಲಾಕ್‌ಡೌನ್‌ಗೂ, ಮನೆಯಲ್ಲಿ ಹೆಂಡತಿ ವಿಧಿಸುವ ಲಾಕ್‌ಡೌನ್‌ಗೂ ವ್ಯತ್ಯಾಸ?
ಸರ್ಕಾರದ ಲಾಕ್‌ಡೌನ್‌ನಲ್ಲಿ ಕೆಮ್ಮುವಾಗ ಮತ್ತು ಸೀನುವಾಗ ಮಾತ್ರ ಬಾಯಿ ಮುಚ್ಚಿಕೊಂಡಿರಬೇಕು.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ಪ್ರಧಾನಿಗಳು ವಿದೇಶಿಗರನ್ನು ಗೆದ್ದರೂ ಆರ್ಥಿಕ ವ್ಯವಸ್ಥೆಯನ್ನು ಮಾತ್ರ ಗೆಲ್ಲಲಾಗಲಿಲ್ಲವಲ್ಲಾ...?
ಚಿತ್ತ ಗೆಲ್ಲಲು ಹೃದಯದ ಮಾತು ಸಾಕು; ವಿತ್ತ ಗೆಲ್ಲಲು ಮೆದುಳಿನದೇ ಆಗಬೇಕು.

ಹರಿತಸ, ಬೆಂಗಳೂರು
ಲಾಕ್‌ಡೌನ್ ಸಂದರ್ಭದಲ್ಲಿ ಜನಸಂಖ್ಯಾ ಸ್ಫೋಟ ಎಂಬ ವರದಿ ಬಂದಿದೆ. ಪರಿಹಾರವೇನು?
ಚಿಂತಿಸದಿರಿ. ಚೀನಾ ಕೊರೊನಾ 3 ಬಿಡುಗಡೆ ಮಾಡಿ ಜನಸಂಖ್ಯೆ ನಿಯಂತ್ರಿಸುವುದಂತೆ.

ಎಂ.ಎಸ್. ಉಷಾ ಪ್ರಕಾಶ್, ಮೈಸೂರು
ಕೊರೊನಾ ನೆಪದಲ್ಲಿ ಪರೀಕ್ಷೆ ಮುಂದೂಡಿದಾಗ ವಿದ್ಯಾರ್ಥಿಗಳಲ್ಲಿ ನಗುವಿನ ಕೇಕೆ ಹೆಚ್ಚಾಗಿದೆಯಲ್ಲಾ...?
ನೆಕ್ಸ್ಟ್ ಎಕ್ಸಾಮ್ಸ್ ಬೇಗ ವಕ್ಕರಿಸುವುದೆಂದು ಅರಿಯರು. ಷಾರ್ಟ್ ಸೈಟ್‌ನವರಿಗೆ ದೂರದ್ದು ಕಾಣದು.

ಆರ್. ಮಧುಸೂದನ್, ಹಾಸನ
ನೋವು ಆದಾಗ ಮಾತ್ರ ಹೊರಬರುವ ಕಣ್ಣೀರು ಆ ಮೊದಲು ಎಲ್ಲಿ ಅಡಗಿ ಕುಳಿತಿರುತ್ತದೆ?
ಸ್ಪಂದನದ ಟ್ಯಾಂಕಲ್ಲಿ. ನರದ ಕಂಟ್ರೋಲ್‌ವಾಲ್ವ್ ತಿರುಚಿದಾಗ ಕಣ್ಣಿನ ನಲ್ಲಿ ಓಪನ್!

ವಿ. ಹಮೀದ್, ವಿಟ್ಲ
ಸುಮ್ಮಸುಮ್ಮನೆ ಕೋಪಗೊಳ್ತಾಳೆ, ನಗ್ತಾಳೆ. ಕಾರಣವೇನಿರಬಹುದು ಸಾರ್?
ಸೆಲ್ಫೀ ಪೋಸ್ಟ್ ಮಾಡಿದ್ದಾಳೆ. ಎರಡು ನಿಮಿಷ ಲೈಕ್ ಬರದಿದ್ದರೆ ಕೋಪ, ಬಂದರೆ ನಗೆ.

ವಿ. ಹೇಮಂತಕುಮಾರ್, ಬೆಂಗಳೂರು
ಆದಿಮಾನವನಿಗೂ, ಆಧುನಿಕ ಮಾನವನಿಗೂ ವ್ಯತ್ಯಾಸವೇನು ರಾಮ್‌ಜೀ?
ಆದಿಮಾನವ ವಸ್ತ್ರಹೀನ; ಆಧುನಿಕ ಮಾನವ ಹೀನವಸ್ತ್ರ!

ಗಣೇಶ ಎಂ. ಪೈ, ಬೆಂಗಳೂರು
ಮುಖಂಡರೊಬ್ಬರು ಹೊರರಾಜ್ಯದ ದೇವರುಗಳ ಮೇಲೆ ಹೆಚ್ಚು ನಂಬಿಕೆ ಇಡಲು ಕಾರಣವೇನು?
ಇಲ್ಲಿನ ದೇವರುಗಳಿಗೆ ಇವರ ನಿಜಗುಣ ಗೊತ್ತಿರುವುದರಿಂದ ಸಹಾಯಕ್ಕೆ ಬರುವುದಿಲ್ಲವಂತೆ.

## ಬಹುಮಾನಿತ ಪ್ರಶ್ನೆ

ನಾಜ್ಯೋತಿ, ಹೂವಿನಹಡಗಲಿ
ಮದುವೆ ಸಂಬಂಧಗಳು ಪರಸ್ಪರ ಆಯ್ಕೆಯೇ ಆಗಿದ್ದರೂ ಋಣಾನುಬಂಧ ಎನ್ನುವುದೇಕೆ?
ಸಾಲ ಮಾಡಿರುತ್ತಾರಲ್ಲಾ.... ಸುಮಾರು ಮದುವೆಗಳದು ಪ್ರೊನೋಟುಬಂಧವೇ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಅತ್ತೆ ಸೊಸೆ ಎಣ್ಣೆ ಸೀಗೇಕಾಯಿ ತರಹ ಇರಲು ಕಾರಣವೇನು?
ನುಣುಚಿಕೊಳ್ಳವುದಕ್ಕೆ ಎಣ್ಣೆ, ಘಾಟಿಗೆ ಸೀಗೇಕಾಯಿ ಬೇಕಾಗುವುದರಿಂದ.

ಕಾವ್ಯಶ್ರೀ ಪತ್ರಿಮಠ, ಸುರಪುರ
ಕನ್ನಡಿಗೂ, ಮುನ್ನುಡಿಗೂ ಅಂತರವೇನು?
ಕನ್ನಡಿ ವಾಸ್ತವ, ಮುನ್ನುಡಿ ಜಾಹೀರಾತು.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ
ಹುಟ್ಟುವಾಗಲೇ ಸಾವನ್ನು ಬೆನ್ನಿಗಂಟಿಕೊಂಡು ಬರುವ ನಾವು ಕೊರೋನಾಗೇಕೆ ಹೆದರುತ್ತೇವೆ?



ಇದು ಎರಡು ವಾರದೊಳಗಿನ ಡೇಟ್ ಹಾಕಿಕೊಂಡ ಡೆತ್ ಸರ್ಟಿಫಿಕೇಟ್ ಸಮೇತ ಬರುವುದರಿಂದ.

ಎ.ಕೆ. ಪಟ್ಟಾಭಿ, ಬೆಂಗಳೂರು
ನಗುವಾಗ ಎಲ್ಲರೂ ನೆಂಟರು. ಅಳುವಾಗ?
ನೆಂಟರು ಹೊಂಟರು (ಹೊರಟರು).

ನರಸಿಂಹ ಪೈ, ಕಾಸರಕೋಡ
ಮಕ್ಕಳ ಪ್ರಗತಿಯ ಶತ್ರು ಯಾರು?
ಕೀಳರಿಮೆ, ಅದನ್ನು ಉಂಟು ಮಾಡುವವರು.

ಬಿ. ಚಂದ್ರೇಗೌಡ, ಬೆಂಗಳೂರು
ಮಧುಚಂದ್ರಕ್ಕೂ, ಮಧುಮೇಹಕ್ಕೂ ಏನು ವ್ಯತ್ಯಾಸ?
ಅದು ಮೋಹನ ರಾಗ, ಇದು ಯಮನ್ ಕಲ್ಯಾಣ್.

■ ರಾಮ್